ಸರ್ಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ

196(499); ಶ್ರೀ ಚೆಲುವರಾಯ ಸ್ವಾಮಿ ಎನ್. (ನಾಗಮಂಗಲ)

ಅ) 2014–15ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ 1 ರಿಂದ 8ನೇ ತರಗತಿವರೆಗೆ ಓದುತ್ತಿರುವ ಎಲ್ಲಾ ವರ್ಗಗಳಿಗೆ ಸೇರಿದ ಮಕ್ಕಳ ಸಂಖ್ಯೆ ಎಷ್ಟು; ಎಲ್ಲಾ ವರ್ಗದ ಮಕ್ಕಳಿಗೆ ಸರ್ಕಾರದಿಂದ ಸಮವಸ್ತ್ರವನ್ನು ನೀಡಲಾಗಿದೆಯೇ (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಯೋಜನೆಗೆ ಸರ್ಕಾರ ಒದಗಿಸಿರುವ ಹಣ ಎಷ್ಟು; ಇದುವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು; ಸರಬರಾಜು ಮಾಡಿರುವ ಸಮವಸ್ತ್ರಗಳ ಮೌಲ್ಯ ಎಷ್ಟು (ಜಿಲ್ಲಾವಾರು ವಿವರ ಒದಗಿಸಿರುವುದು)

ಇ) ಈ ಅವಧಿಯಲ್ಲಿ, ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಸಾಮಾನ್ಯವರ್ಗದ ಮಕ್ಕಳಿಗೆ ಸಮವಸ್ತ್ರವನ್ನು ನೀಡಲು ಸರ್ಕಾರ ಅನುಮೋದನೆಯನ್ನು ನೀಡದೇ ಇರುವುದು ನಿಜವೇ; ಇದರಿಂದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಬಡ ಮಕ್ಕಳಲ್ಲಿಯೂ ಜಾತಿಯತೆ ವರ್ಗ ಸಂಘರ್ಷ ಮನೋಭಾವನೆಯನ್ನು ಬಿತ್ತಿದಂತೆ ಆಗುವುದಿಲ್ಲವೇ?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2014–15ನೇ ಸಾಲಿನಲ್ಲಿ ಸರ್ಕಾರಿ ಶಾಲೆಗಳಲ್ಲಿ 1 ರಿಂದ 8ನೇ ತರಗತಿವರೆಗೆ ಓದುತ್ತಿರುವ ಎಲ್ಲಾ ವರ್ಗಗಳಿಗೆ ಸೇರಿದ ಮಕ್ಕಳ ಸಂಖ್ಯೆ;

ಕ್ರ.ಸಂ.	ವಿದ್ಯಾರ್ಥಿಗಳ ವರ್ಗ	ವಿದ್ಯಾರ್ಥಿಗಳ ಸಂಖ್ಯೆ
1	ಎಲ್ಲಾ ವರ್ಗದ ಬಾಲಕೀಯರು	22,07,343
2	ಪರಿಶಿಷ್ಟ ಜಾತಿಯ ಬಾಲಕರು	5,33,513
3	ಪರಿಶಿಷ್ಟ ವರ್ಗದ ಬಾಲಕರು	2,34,224
4	ಬಿ.ಪಿ.ಎಲ್ ಬಾಲಕರು	5,43,731
5	ಇತರೆ ವರ್ಗದ ಬಾಲಕರು	8,17,705
	ಒಟ್ಟು	**43,36,516**

2014–15ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ 2ನೇ ಜೊತೆ ಸಮವಸ್ತ್ರವನ್ನು 1 ರಿಂದ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವರ್ಗದ ಹೆಣ್ಣು ಮಕ್ಕಳು, ಪ.ಜಾ. ಬಾಲಕರು, ಪ.ವ. ಬಾಲಕರು, ಬಿ.ಪಿ.ಎಲ್. ವರ್ಗದ ಶೇ.40 ರಷ್ಟು ಬಾಲಕರಿಗೆ ಮಾತ್ರ ಕೇಂದ್ರ ಸರ್ಕಾರದಿಂದ ಅನುದಾನ ಮಂಜೂರಾಗಿರುತ್ತದೆ.

ಜಿಲ್ಲಾವಾರು ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ. (ಪು.ತಿ.ನೋ)

ಆ) ಸರ್ವ ಶಿಕ್ಷಣ ಅಭಿಯಾನದ ವತಿಯಿಂದ 2 ನೇ ಜೊತೆ ಸಮವಸ್ತ್ರವನ್ನು ವಿತರಿಸಲು ಕೇಂದ್ರ ಸರ್ಕಾರದಿಂದ 35,18,811 ವಿದ್ಯಾರ್ಥಿಗಳಿಗೆ ಮಂಜೂರಾದ ಅನುದಾನ ರೂ. 70.37 ಕೋಟಿಗಳು.

ರಾಜ್ಯ ಯೋಜನಾ ಕಛೇರಿಯಿಂದ ಶಾಲೆಗಳ ಎಸ್.ಡಿ.ಎಂ.ಸಿ. ಖಾತೆಗೆ ಸಮವಸ್ತ್ರವನ್ನು ಖರೀದಿ, ಮಾಡಲು ಇ.ಸಿ.ಎಸ್. ಮುಖಾಂತರ ರೂ. 70.37 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಸರಬರಾಜು ಮಾಡಿರುವ ಸಮವಸ್ತ್ರಗಳ ಒಟ್ಟು ಮೌಲ್ಯ 70.37 ಕೋಟಿ ರೂ.ಗಳು (ಜಿಲ್ಲಾವಾರು ಪಟ್ಟಿಯನ್ನು ಲಗತ್ತಿಸಿದೆ) (ಪು.ತಿ.ನೋ)

ಇ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 8,17,705 ಇತರೆ ವರ್ಗದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಈ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವುದಿಲ್ಲ. ಈ ವಿದ್ಯಾರ್ಥಿಗಳ ಸಮವಸ್ತ್ರದ ಘಟಕವೆಚ್ಚ 200/– ರಂತೆ ರೂ. 16.35 ಕೋಟಿಗಳನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲು ಅನುಮೋದನೆ ದೊರೆತಿದೆ.

ಅನುಬಂಧ--I

2014-15 ನೇ ಸಾಲಿನ 2ನೇ ಹಂತ ಸಮವಸ್ತ್ರ ವಿತರಣಾ ವಿವರ

ಕ್ರ. ಸಂ	ಜಿಲ್ಲೆಯ ಹೆಸರು	ಒಟ್ಟು ಮಕ್ಕಳ ಸಂಖ್ಯೆ	ಮೊತ್ತ (ಲಕ್ಷಗಳಲ್ಲಿ)
1	BAGALKOT	163199	326.398
2	BANGALORE RURAL	51245	102.49
3	BANGALORE NORTH	54768	109.536
4	BANGALORE SOUTH	84820	169.64
5	BELGAUM	146419	292.838
6	CHIKKODI	183956	367.912
7	BELLARY	201118	402.236
8	BIDAR	136501	273.002
9	BIJAPUR	205438	410.876
10	CHAMARAJANAGARA	58377	116.754
11	CHIKKABALLAPURA	69524	139.048
12	CHIKKAMANGALORE	59570	119.14
13	CHITRADURGA	116135	232.27
14	DAKSHINA KANNADA	75367	150.734

15	DAVANAGERE	118239	236.478
16	DHARWAD	102574	205.148
17	GADAG	78982	157.964
18	GULBARGA	205100	410.2
19	HASSAN	87174	174.348
20	HAVERI	119374	238.748
21	KODAGU	26328	52.656
22	KOLAR	84093	168.186
23	KOPPAL	133596	267.192
24	MANDYA	79585	159.17
25	MYSORE	145278	290.556
26	RAICHUR	185557	371.114
27	RAMANAGARA	52153	104.306
28	SHIMOGA	94808	189.616
29	TUMKUR	81138	162.276
30	MADHUGIRI	67192	134.384
31	UDUPI	38177	76.354
32	UTTARA KANNADA	36074	72.148
33	SIRSI	51346	102.692
34	YADAGIRI	125606	251.212
	Total	**3518811**	**7037.622**